CC No.16/2024
CW-1  PW-1

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 16/2024**

**ಹೆಸರು** :- **ಹೆಚ್ ವಿ ಚಂದನ್**

**ತಂದೆಯ ಹೆಸರು** :- **ವಿರೂಪಾಕ್ಷ**

**ವಯಸ್ಸು** :- **29 ವರ್ಷ**

**ಉದ್ಯೋಗ** :- **ಪುರಸಭೆ ಪ್ರಭಾರ ಮುಖ್ಯ ಅಧಿಕಾರಿ**

**ಸ್ಥಳ** :- **ಸೊರಬ**

**ದಿನಾಂಕಃ 11.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ 02.06.2022 ರಿಂದ 01.08.2024 ರವರೆಗೆ ಪರಿಸರ ಅಭಿಯಂತರರಾಗಿ ಪುರಸಭೆ ಸೊರಬದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22.11.2022 ರಂದು ನಾನು ಸೊರಬ ಪುರಸಭೆ ಮುಖ್ಯ ರಸ್ತೆಯಲ್ಲಿರುವ ಸುರಭಿ ಮಳಿಗೆಯನ್ನು ತೆರವುಗೊಳಿಸಲು ಹೋಗಿದ್ದಾಗ, ಆರೋಪಿ ಮತ್ತು ಇತರೆ ಜನರು ಸೇರಿ ಗಲಾಟೆ ಮಾಡಿರುತ್ತಾರೆ. ಆಗ ಸಮಯ 10.30 ಆಗಿರುತ್ತದೆ. ಸದರಿ ವಿಚಾರವನ್ನು ನಮ್ಮ ಕಛೇರಿಯ ಮುಖ್ಯ ಅಧಿಕಾರಿಗೆ ತಿಳಿಸಿ, ಸೊರಬ ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಲಿಖಿತ ದೂರಾಗಿದ್ದು, ಸಾಕ್ಷಿ ಅದನ್ನು  ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1 ಮತ್ತು

ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಯು ನನಗೆ ಅವಾಚ್ಯ ಶಬ್ಧಗಳಿಂದ ಬೈದು ನಮ್ಮ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಮತ್ತು ಸದರಿ ಮಳಿಗೆಯನ್ನು ತೆರವುಗೊಳಿಸಿದಲ್ಲಿ ಜೀವ ಸಹಿತ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿರುತ್ತಾನೆ. ನಂತರ ದಿಃ 30.11.2022 ರಂದು ಸೊರಬ ಮುಖ್ಯ ರಸ್ತೆಯಲ್ಲಿರುವ ಸುರಭಿ ಮಳಿಗೆಯಲ್ಲಿ ನಾನು ಮತ್ತು ಚಾಸಾ-2, 3 ರವರ ಸಮಕ್ಷಮ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಬೆಳಗ್ಗೆ 10.30 ರಿಂದ 11.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಸ್ಥಳದಲ್ಲಿ ತೆಗೆದ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಾನು ಗಲಾಟೆಯನ್ನು ಕಣ್ಣಾರೆ ನೋಡಿದ ಬಗ್ಗೆ ಆ ದಿನ ಆರೋಪಿಯ ಹೆಂಡತಿ ಸುಲ್ತಾನ್ ಬೇಗಂ ಘಟನಾ ಸ್ಥಳದಲ್ಲಿ ಇದ್ದು, ಆದರೆ ಸುಲ್ತಾನ್ ಬೇಗಂ ರವರು ನಮ್ಮ ಕರ್ತವ್ಯ ಅಡ್ಡಿಪಡಿಸಿರುವುದಿಲ್ಲ ಎಂದು ಮರುಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ

ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವೈ.ಜಿ.ಪಿ ವಕೀಲರಿಂದಃ**

ಸುರಭಿ ಮಳಿಗೆಯು 8 ಮಳಿಗೆ ಇರುವ ಮಳಿಗೆ ಅಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಸದರಿ ಮಳಿಗೆಯ ಹರಾಜು ಆಗಿ ಸುಮಾರು 12 ವರ್ಷ ಆಗಿತ್ತು. ಸದರಿ ಮಳಿಗೆಯಲ್ಲಿರುವ ಅಂಗಡಿ ನಡೆಸುತ್ತಿರುವ ವ್ಯಕ್ತಿಗಳನ್ನು ನ್ಯಾಯಾಲಯದಿಂದ ಹೊರಹಾಕುವಂತೆ ಆದೇಶ ಆಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮುಖ್ಯಾಧಿಕಾರಿಯವರ ನಿರ್ದೇಶನದಂತೆ ತೆರವುಗೊಳಿಸಲು ಹೋಗಿರುತ್ತೇವೆ ಎಂದು ಉತ್ತರಿಸುತ್ತಾರೆ. ಮಾನ್ಯ ಮುಖ್ಯಾಧಿಕಾರಿಗಳು ಆದೇಶದ ಪ್ರತಿಯನ್ನು ನೀಡಿರುತ್ತಾರೆ. ನಾನು ಅದನ್ನು ಪೊಲೀಸರಿಗೆ ನೀಡಿರುತ್ತೇನೆ. ತೆರವುಗೊಳಿಸುವ ಪೂರ್ವದಲ್ಲಿ ಮಳಿಗೆಯ ಮಾಲೀಕರಿಗೆ ನೋಟಿಸ್ ನೀಡಿರುತ್ತೇವೆ. 60 ದಿನಗಳ ಮುಂಚೆ ನೋಟಿಸ್ ನೀಡಿರುತ್ತೇವೆ. ಸದರಿ ನೋಟಿಸನ ಪ್ರತಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಆ ಮಳಿಗೆಯಲ್ಲಿ ಆರೋಪಿಯು ಹರಾಜುದಾರರ ಮತ್ತು ಅಂಗಡಿಯ ಮಾಲೀಕರು ಅಲ್ಲ ಅಂದರೆ ಸರಿಯಲ್ಲ.

ಆ ದಿನ ಘಟನಾ ಸ್ಥಳದಲ್ಲಿ ಸುಮಾರು 80–100 ಜನ ಸೇರಿದ್ದರು. ಅವರೆಲ್ಲರ ಹೆಸರು ನನಗೆ ಗೊತ್ತಿಲ್ಲ. ಸುರಭಿ ವಾಣಿಜ್ಯ ಸಂಕೀರ್ಣ ಮಳಿಗೆಯನ್ನು ಹೊರತುಪಡಿಸಿ ನಮ್ಮ ಕಛೇರಿಯ ಮುಂಭಾಗದಲ್ಲಿ ಖಾಸಗಿ ಬಸ್ ಸ್ಟಾಂಡ್ ನಲ್ಲಿಯೂ ಮಳಿಗೆಗಳು ಇವೆ. ನಾನು ಆ ದಿನ ಘಟನಾ ಸ್ಥಳಕ್ಕೆ ಹೋದಾಗ ವಾಣಿಜ್ಯ ಮಳಿಗೆಗಳ ಬಾಗಿಲು ತೆರೆದಿತ್ತು. ಸದರಿ

ಮಳಿಗೆಯ ಬಾಡಿಗೆದಾರರ ಹೆಸರು ಗೊತ್ತಿಲ್ಲ. ಅವರೆಲ್ಲರನ್ನು ಪೊಲೀಸರ ಸಹಾಯದಿಂದ ಹೊರಗೆ ಹಾಕಿ, ಕಛೇರಿಯ ರಜಿಸ್ಟರ್ ಗಳನ್ನು ವರದಿ ತಯಾರಿಸಿರುತ್ತೀರಿ ಅಂದರೆ ಸರಿ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ದಿಃ 22.11.2022 ರಂದು ಸ್ಥಳಕ್ಕೆ ಹೋಗಿದ್ದಾಗಲಿ ಆರೋಪಿಯು ನನ್ನ ಕೆಲಸಕ್ಕೆ ಅಡ್ಡಿಪಡಿಸುವುದಾಗಲಿ, ಅವಾಚ್ಯ ಶಬ್ಧಗಳಿಂದ ಬೈಯ್ಯುವುದಾಗಲಿ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿತನು ಸದರಿ ಮಳಿಗೆಯಿಂದ ಹೊರಗೆ ಹಾಕಬೇಡಿ ಎಂದು ಶಾಸಕರ ವಿರುದ್ಧ ಹೋರಾಡುತ್ತಿದ್ದ, ಆದ ಕಾರಣ ಶಾಸಕರ ಒತ್ತಡಕ್ಕೆ ಮಣಿದು ಆತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೀರಿ ಅಂದರೆ ಸರಿಯಲ್ಲ. ಸುರಭಿ ವಾಣಿಜ್ಯ ಸಂಕೀರ್ಣಕ್ಕೂ ಹಾಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಿಪಿ–3 ಭಾವಚಿತ್ರವು ಖಾಸಗಿ ಬಸ್ ಸ್ಟಾಂಡ್ ನಲ್ಲಿರುವ ಮಳಿಗೆಯ ಭಾವಚಿತ್ರ ಅಂದರೆ ಸರಿಯಲ್ಲ. ನಿಪಿ–2 ರಂತೆ ದಿಃ 30.11.2022 ರಂದು ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**